ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	877
ಸದಸ್ಯರ ಹೆಸರು	ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವವರು	ಮಾನ್ಯ ಗಣಿ ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲ ಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.
ಉತ್ತರಿಸಬೇಕಾದ ದಿನಾಂಕ	21-12-2021

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಅನ್ವಯ ಕಳೆದ 02 ವರ್ಷಗಳಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿತ್ತು: (ಜಿಲ್ಲಾವಾರು ಮಾಹಿತಿ ನೀಡುವುದು)	ಮಕ್ಕಳ ಪಾಲನೆ ಮತ್ತು ರಕ್ಷಣೆಗಾಗಿ ಮಕ್ಕಳ ರಕ್ಷಣಾ ನಿರ್ದೇಶನಾಲಯದ ಮೂಲಕ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 ಹಾಗೂ ಮಾದರಿ ನಿಯಮಗಳು 2016ನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾಯ್ದೆಯಡಿಯಲ್ಲಿ 1. ಪಾಲನೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳಿಗೆ ಪ್ರತಿ ಜಿಲ್ಲೆಯಲ್ಲಿ ಮಕ್ಕಳ ಕಲ್ಯಾಣ ಸಮಿತಿಗಳನ್ನು ರಚಿಸಲಾಗಿದೆ. ಪಾಲನೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳಿಗೆ ಈ ಸಮಿತಿಗಳ ಮೂಲಕ ಪಾಲನೆ, ರಕ್ಷಣೆ, ಪುನರ್ವಸತಿ, ಸಮಾಲೋಚನೆ ಮತ್ತು ಇತರೆ ಸೇವೆಗಳನ್ನು ಒದಗಿಸಲಾಗುತ್ತಿದೆ. ಇಂತಹ ಮಕ್ಕಳಿಗಾಗಿ ಸರ್ಕಾರದಿಂದ • 33 ಬಾಲಕರ ಬಾಲಮಂದಿರ, • 31 ಬಾಲಕಿಯರ ಬಾಲಮಂದಿರ, • 1 ಅನುಪಾಲನಾ ಗೃಹ, • 11 ವಿಶೇಷ ದತ್ತು ಸಂಸ್ಥೆ, • 1 ಶಿಶು ಮಂದಿರ ಹಾಗೂ ಸರ್ಕಾರಿ ಅನುದಾನಿತ ಸಂಸ್ಥೆಗಳಲ್ಲಿ • 6 ಅರ್ಹ ಸೌಲಭ್ಯಗಳು, • 34 ತೆರೆದ ತಂಗುದಾಣಗಳನ್ನು ಸ್ಥಾಪಿಸಲಾಗಿದೆ. 2. ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳ ಪ್ರಕರಣಗಳನ್ನು ಪರಿಶೀಲಿಸಲು ಪ್ರತಿ ಜಿಲ್ಲೆಯಲ್ಲಿ ಬಾಲ ನ್ಯಾಯ ಮಂಡಳಿಗಳನ್ನು ರಚಿಸಲಾಗಿದ್ದು, ಇಂತಹ ಮಕ್ಕಳಿಗಾಗಿ • 17 ವೀಕ್ಷಣಾಲಯಗಳು, • 1 ಪ್ಲೇಸ್ ಆಫ್ ಸೇಫ್ಟಿ ಮತ್ತು • 1 ವಿಶೇಷ ಗೃಹವನ್ನು ನಿರ್ವಹಿಸಲಾಗುತ್ತಿದೆ. (ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ**-1ರಲ್ಲಿ ಲಗತ್ತಿಸಿದೆ)

		ಇದರೊಂದಿಗೆ 1 ಪ್ರಾಯೋಜಕತ್ವ ಕಾರ್ಯಕ್ರಮ 2 ವಿಶೇಷ ಪಾಲನಾ ಯೋಜನೆ 3 ಮುಖ್ಯಮಂತ್ರಿ ಬಾಲ ಸೇವಾ ಯೋಜನೆ ಬಾಲ ಹಿತೈಷಿ ಯೋಜನೆ 4 ಉಪಕಾರ್ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.
ಆ)	ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಮಕ್ಕಳನ್ನು ದತ್ತು ತೆಗೆದುಕೊಳ್ಳಲಾಗಿದೆ; ದತ್ತಕ್ಕೆ ಪಡೆದಿರುವ ಮಕ್ಕಳ ಪಾಲನೆ ಮತ್ತು ಪೋಷಣೆ ಸಮರ್ಪಕವಾಗಿ ಇದೆಯೇ; ಎಂಬುದರ ಕುರಿತು ಪರಿಶೀಲನೆ ನಡೆಸಲಾಗಿದೆಯೇ; (ಜಿಲ್ಲಾವಾರು ಮಾಹಿತಿ ನೀಡುವುದು)	ರಾಜ್ಯದಲ್ಲಿ ಕಳೆದ 03 ವರ್ಷಗಳಲ್ಲಿ ದತ್ತು ನೀಡಲಾಗಿರುವ ಮಕ್ಕಳ ವಿವರವನ್ನು ಜಿಲ್ಲಾವಾರು ಅನುಬಂಧದಲ್ಲಿ ಲಗತ್ತಿಸಲಾಗಿದೆ. ದತ್ತು ಪಡೆದಿರುವ ಮಕ್ಕಳ ಪಾಲನೆ ಮತ್ತು ಪೋಷಣೆ ಸಮರ್ಪಕವಾಗಿ ಇದೆಯೇ ಎಂಬುದರ ಕುರಿತ ಪರಿಶೀಲನೆಯನ್ನು ಮಕ್ಕಳನ್ನು ದತ್ತು ನೀಡಿದ ನಂತರ ಪ್ರತಿ 6 ತಿಂಗಳಿಗೊಮ್ಮೆ 02 ವರ್ಷಗಳವರೆಗೂ ಅನುಸರಣೆಯನ್ನು ಮಾಡುವ ಮೂಲಕ ವಿಶೇಷ ದತ್ತು ಸಂಸ್ಥೆಯಿಂದ ಖಾತ್ರಿ ಪಡಿಸಿಕೊಳ್ಳಲಾಗುತ್ತಿದೆ.
ಇ)	ಅನಾಥ ಮಕ್ಕಳ ರಕ್ಷಣೆ ಪಾಲನೆಗಾಗಿ ಸರ್ಕಾರ ಕೈಗೊಂಡ ಕಾರ್ಯಕ್ರಮಗಳೇನು; ಪ್ರಸ್ತುತ ಸರ್ಕಾರದ ಆರೈಕೆಯಲ್ಲಿರುವ ಮಕ್ಕಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)	ಮಕ್ಕಳ ರಕ್ಷಣಾ ನಿರ್ದೇಶನಾಲಯದ ಅಡಿಯಲ್ಲಿ ಅನುಷ್ಠಾನ ಮಾಡಲಾಗುತ್ತಿರುವ ಸಮಗ್ರ ಮಕ್ಕಳ ರಕ್ಷಣಾ ಯೋಜನೆ/ಮಿಷನ್ ವಾತ್ಸಲ್ಯ ಯೋಜನೆಯಡಿಯಲ್ಲಿ ಅನಾಥ, ಪರಿತ್ಯಜಿಸಲ್ಪಟ್ಟ, ಒಪ್ಪಿಸಲ್ಪಟ್ಟ, ದೌರ್ಜನ್ಯಕ್ಕೊಳಗಾದ ಒಟ್ಟಾರೆ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2015ರ ಸೆಕ್ಷನ್ 2(14)ರ ಅಡಿಯಲಿ ವ್ಯಾಖ್ಯಾನಿಸಿರುವ ಪಾಲನೆ ಮತ್ತು ರಕ್ಷಣೆ ವ್ಯಾಪ್ತಿಯಲಿ ಬರುವ ಎಲ್ಲಾ ಮಕ್ಕಳಿಗೆ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2015ರನ್ವಯ ನೋಂದಾಯಿಸಲ್ಪಟ್ಟ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಮಕ್ಕಳ ಅಗತ್ಯತೆಗೆ ಅನುಗುಣವಾಗಿ ಪಾಲನೆ ಮತ್ತು ರಕ್ಷಣೆ ಹಾಗೂ ಪುನರ್ವಸತಿಯನ್ನು ಒದಗಿಸಲಾಗುತ್ತಿದೆ. ಕೋವಿಡ್-19 ಕಾರಣದಿಂದ ಅನಾಥರಾದ ಮಕ್ಕಳ ಆರೈಕೆಗಾಗಿ ಹಾಗೂ ಅವರ ವಿದ್ಯಾಭ್ಯಾಸವನ್ನು ಮುಂದುವರೆಸಲು ಅನುವಾಗುವಂತೆ ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ಈ ಕೆಳಕಂಡ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ. • ರಾಜ್ಯ ಸರ್ಕಾರದ: ಮುಖ್ಯಮಂತ್ರಿ ಬಾಲಸೇವಾ ಯೋಜನೆ, ಬಾಲಹಿತೈಷಿ ಯೋಜನೆ ಮತ್ತು • ಕೇಂದ್ರ ಸರ್ಕಾರದ: ಜಿ ಅಚಿಡಿಛ ಈಡಿಹ ಖಿಃಜಡಿಜಚಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸರ್ಕಾರ/ಸರ್ಕಾರಿ ಅನುದಾನಿತ ಒಟ್ಟು 135 ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ನವೆಂಬರ್ 2021ರ ಅಂತ್ಯಕ್ಕೆ ಸರ್ಕಾರಿ ಮಕ್ಕಳ ಪಾಲನ ಸಂಸ್ಥೆಯಲ್ಲಿ 2266 ಮಕ್ಕಳು ಮತ್ತು ಅನುದಾನಿತ ಮಕ್ಕಳ ಪಾಲನಾ ಸಂಸ್ಥೆಯಲ್ಲಿ 1364, ಒಟ್ಟು3630 ಮಕ್ಕಳು ಆಶ್ರಯ ಪಡೆದಿರುತ್ತಾರೆ. ಹಾಗೆಯೇ

		ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ 566 ಮತ್ತು ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಲ್ಲಿ ಅನುದಾನಿತ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ 209 ಒಟ್ಟು 775 ಅನಾಥ ಮಕ್ಕಳು ಆಶ್ರಯ ಪಡೆದಿರುತ್ತಾರೆ. (ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ**-2ರಲ್ಲಿ ಲಗತ್ತಿಸಿದೆ)
ಈ)	ಹಲವಾರು ಹೆಣ್ಣು ಮಕ್ಕಳು ಬೆಂಗಳೂರು ನಗರಾದ್ಯಂತ ಸಣ್ಣ ಮಕ್ಕಳನ್ನು ಕಂಕುಳಿನಲ್ಲಿ ಇಟ್ಟುಕೊಂಡು ಭಿಕ್ಷಾಟನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅಂತಹ ಹೆಣ್ಣು ಮಕ್ಕಳ ಮತ್ತು ಮಗುವಿನ ರಕ್ಷಣೆಗಾಗಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ?	ಬಂದಿದೆ. ಭಿಕ್ಷಾಟನೆಯಿಂದ ರಕ್ಷಿಸಲ್ಪಟ್ಟ 06 ವರ್ಷಕ್ಕಿಂತ ಕೆಳಗಿನ ಮಕ್ಕಳನ್ನು ತಾಯಿಯಿಂದ ಬೇರ್ಪಡಿಸಲು ಅವಕಾಶವಿರುವುದಿಲ್ಲ. ಈ ವಯೋಮಾನದ ಮಕ್ಕಳೊಂದಿಗೆ ಭಿಕ್ಷಾಟನೆಯಲ್ಲಿ ತೊಡಗಿರುವ ತಾಯಿಯನ್ನು "ಭಿಕ್ಷಾಟನೆ ನಿಷೇಧ ಕಾಯ್ದೆಯಡಿ" ಬಂಧಿಸಿದ್ದಲ್ಲಿ ಮಗುವನ್ನು ತಾಯಿಯೊದಿಗೆ ರಾಜ್ಯ ಮಹಿಳಾ ನಿಲಯಕ್ಕೆ ಕಳುಹಿಸಲಾಗುವುದು. ತಂದೆ-ತಾಯಿ ಒಟ್ಟಿಗಿರುವ 6 ವರ್ಷಕ್ಕಿಂತ ಮೇಲ್ಪಟ್ಟ ಮಕ್ಕಳನ್ನು ಭಿಕ್ಷಾಟನೆಯಿಂದ ರಕ್ಷಿಸಿದ್ದಲ್ಲಿ, ಭಿಕ್ಷಾಟನೆ ಕಾಯ್ದೆಯಡಿ ತಂದೆ-ತಾಯಿ/ಪೋಷಕರನ್ನು ಬಂಧಿಸಿದ್ದಲ್ಲಿ ಅಥವಾ 18 ವರ್ಷಕ್ಕಿಂತ ಕಡಿಮೆ ಇರುವ ಯಾವುದೇ ವಯೋಮಾನದ ಮಗುವು ಒಬ್ಬಂಟಿಯಾಗಿ ಭಿಕ್ಷಾಟನೆಯಲ್ಲಿ ತೊಡಗಿದ್ದಲ್ಲಿ, ಸದರಿ ಮಕ್ಕಳ ಪಾಲನೆ ಮತ್ತು ರಕ್ಷಣೆಯನ್ನು ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015ರಡಿ ನೋಂದಾಯಿತ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಒದಗಿಸಲಾಗುವುದು. ಇದಲ್ಲದೇ ಸಾರ್ವಜನಿಕರು ಬೀದಿ ಬದಿ ಮಕ್ಕಳಿಂದ ವಸ್ತುಗಳನ್ನು ಖರೀದಿಸುವುದು ಅಥವಾ ಮಕ್ಕಳಿಗೆ ಭಿಕ್ಷೆ ನೀಡುವುದರಿಂದ ಆಗುವ ದುಷ್ಪರಿಣಾಮಗಳ ಕುರಿತು ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಅರಿವು ಮೂಡಿಸಲು ಹಲವಾರು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಕಡತ ಸಂಖ್ಯೆ: ಮಮಇ 129 ಮಭಾಬ 2021

Halappa B.A.

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ಅನುಬಂಧ-1 ವಿಧಾನ ಪರಿಷತ್ತಿನ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:877ಗೆ ಮಾಹಿತಿ						
ಕ್ರಮ ಸಂಖ್ಯೆ	ಜಿಲ್ಲೆ	ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆ		ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಅನುದಾನಿತ ಮಕ್ಕಳ ಪಾಲನಾ ಸಂಸ್ಥೆಗಳು ಮಾತ್ರ		ಷರಾ
		ಪ್ರಸ್ತುತ ಸಂಸ್ಥೆಯಲ್ಲಿರುವ ಒಟ್ಟು ಮಕ್ಕಳ ಸಂಖ್ಯೆ	ಅನಾಥ ಮಕ್ಕಳ ಸಂಖ್ಯೆ	ಪ್ರಸ್ತುತ ಸಂಸ್ಥೆಯಲ್ಲಿರುವ ಒಟ್ಟು ಮಕ್ಕಳ ಸಂಖ್ಯೆ	ಅನಾಥ ಮಕ್ಕಳ ಸಂಖ್ಯೆ	
1	ಬಾಗಲಕೋಟೆ	99	26	20	6	
2	ಬಳ್ಳಾರಿ	114	52	61	3	0
3	ಬೆಳಗಾವಿ	88	18	18	2	
4	ಬೆಂಗಳೂರು ಗ್ರಾಮಾಂತರ	9	0	154	8	
5	ಬೆಂಗಳೂರು ನಗರ	234	80	288	100	ಸರ್ಕಾರಿ ಬಾಲಕರ ಬಾಲಮಂದಿರದಲ್ಲಿ 06 ಕಿವುಡು ಮೂಗ ಮಕ್ಕಳಿದ್ದು ಅವರ ಪೋಷಕರ ಖಚಿತ ಮಾಹಿತಿ ಲಭ್ಯವಾಗುತ್ತಿಲ್ಲ
6	ಬೀದರ್	129	29	21	15	
7	ಚಾಮರಾಜನಗರ	21	7	0	0	ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಅನುದಾನಿತ ಮಕ್ಕಳ ಪಾಲನಾ ಸಂಸ್ಥೆಗಳು ಇರುವುದಿಲ್ಲ
8	ಚಿಕ್ಕಬಳ್ಳಾಪುರ	25	5	79	7	
9	ಚಿಕ್ಕಮಗಳೂರು	46	7	27	0	
10	ಚಿತ್ರದುರ್ಗ	101	21	8	1	2018 ರಿಂದ ಮಡಿಲು ದತ್ತು ಕೇಂದ್ರ, ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇದುವರೆವಿಗೂ ಅನುದಾನ ಬಿಡುಗಡೆಯಾಗಿರುವುದಿಲ್ಲ
11	ದಕ್ಷಿಣ ಕನ್ನಡ	39	5	50	18	
12	ದಾವಣಗೆರೆ	110	39	24	0	
13	ಧಾರವಾಡ	162	54			
14	ಗದಗ	84	3			
15	ಹಾಸನ	80	11	34	6	
16	ಹಾವೇರಿ	41	11	72	0	
17	ಕಲಬುರಗಿ	128	37	24	1	
18	Kodagu	57	19		1	
19	ಕೋಲಾರ	32	5	0	0	0

21	ಮಂಡ್ಯ	51	11	38	7	0
22	Mysore	110	31	31	6	
23	ರಾಯಚೂರು	52	23	34	0	ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಅನುದಾನಿತ ಮಕ್ಕಳ ಪಾಲನಾ ಸಂಸ್ಥೆಗಳು
24	ರಾಮನಗರ	29	2	225	5	-
25	ಶಿವಮೊಗ್ಗ	87	2	24	0	0
26	ತುಮಕೂರು	51	12	0	0	ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಅನುದಾನಿತ ಮಕ್ಕಳ ಪಾಲನಾ ಸಂಸ್ಥೆಗಳು ಇರುವುದಿಲ್ಲ
27	ಉಡುಪಿ	34	0	20	0	-
28	ಉತ್ತರ ಕನ್ನಡ	46	2			
29	ವಿಜಯಪುರ	99	19	50	2	
30	ಯಾದಗಿರಿ	54	20	54	20	
Total		**2266**	566	**1364**	**209**	

ಅನುಬಂಧ-2 ವಿಧಾನ ಪರಿಷತ್ತಿನ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:877ಗೆ ಮಾಹಿತಿ.

ಕ್ರಮ ಸಂಖ್ಯೆ	ಜಿಲ್ಲೆ	ಬಾಲಕರ ಬಾಲಮಂದಿರಗಳ ಸಂಖ್ಯೆ	ಬಾಲಕಿಯರ ಬಾಲಮಂದಿರ ಸಂಖ್ಯೆ	ವೀಕ್ಷಣಾಲಯ ಸಂಖ್ಯೆ	ಪ್ಲೇಸ್ ಆಫ್ ಸೇಫ್ಟೀ ಸಂಖ್ಯೆ	ಶಿಶುಮಂದಿರ ಸಂಖ್ಯೆ	ಅನುಪಾಲನ ಗೃಹ ಸಂಖ್ಯೆ	ವಿಶೇಷ ದತ್ತು ಸಂಸ್ಥೆ ಸಂಖ್ಯೆ	ಅರ್ಹ ಸೌಲಭ್ಯ ಸಂಖ್ಯೆ	ವಿಶೇಷ ಗೃಹ ಸಂಖ್ಯೆ	ತೆರೆದ ತಂಗುದಾಣ ಸಂಖ್ಯೆ
1	ಬಾಗಲಕೋಟೆ	1	1	0	0	0	0	0	0	0	2
2	ಬಳ್ಳಾರಿ	1	1	1	0	0	0	1	0	0	0
3	ಬೆಳಗಾವಿ	2	1	1	0	0	1	0	0	0	2
4	ಬೆಂಗಳೂರು ಗ್ರಾಮಾಂತರ	1	1	1	0	0	0	0	1	0	4
5	ಬೆಂಗಳೂರು ನಗರ	2	1	1	1	1	0	1	2	1	5
6	ಬೀದರ್	1	1	1	0	0	0	0	0	0	0
7	ಚಾಮರಾಜನಗರ	1	1	0	0	0	0	0	0	0	0
8	ಚಿಕ್ಕಬಳ್ಳಾಪುರ	1	1	0	0	0	0	0	0	0	1
9	ಚಿಕ್ಕಮಗಳೂರು	1	1	0	0	0	0	0	0	0	0
10	ಚಿತ್ರದುರ್ಗ	1	1	1	0	0	0	0	0	0	0
11	ದಕ್ಷಿಣ ಕನ್ನಡ	1	1	0	0	0	0	0	1	0	0
12	ದಾವಣಗೆರೆ	1	1	1	0	0	0	1	0	0	0
13	ಧಾರವಾಡ	1	2	1	0	0	0	1	0	0	2
14	ಗದಗ	1	1	0	0	0	0	0	0	0	0
15	ಹಾಸನ	1	1	1	0	0	0	0	0	0	1
16	ಹಾವೇರಿ	1	1	0	0	0	0	0	0	0	3
17	ಕಲಬುರಗಿ	1	1	1	0	0	0	1	0	0	4
18	ಕೊಡಗು	1	1		0	0	0	1	0	0	0
19	ಕೋಲಾರ	1	1	1	0	0	0	1	0	0	0
20	ಕೊಪ್ಪಳ	1	1	0	0	0	0	0	0	0	0
21	ಮಂಡ್ಯ	1	1	0	0	0	0	0	0	0	0
22	ಮೈಸೂರು	1	1	1	0	0	0	1	1	0	0
23	ರಾಯಚೂರು	1	1	1	0	0	0	1	0	0	0
24	ರಾಮನಗರ	1	1	0	0	0	0	0	0	0	1
25	ಶಿವಮೊಗ್ಗ	1	1	1	0	0	0	1	0	0	2
26	ತುಮಕೂರು	1	1	0	0	0	0	0	0	0	0

ಅನುಬಂಧ-1 ವಿಧಾನ ಪರಿಷತ್ತಿನ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:877ಗೆ ಮಾಹಿತಿ.

ಕ್ರಮ ಸಂಖ್ಯೆ	ಜಿಲ್ಲೆ	ಬಾಲಕರ ಬಾಲಮಂದಿರಗಳ ಸಂಖ್ಯೆ	ಬಾಲಕಿಯರ ಬಾಲಮಂದಿರ ಸಂಖ್ಯೆ	ವೀಕ್ಷಣಾಲಯ ಸಂಖ್ಯೆ	ಪ್ಲೇಸ್ ಆಫ್ ಸೇಫ್ಟಿ ಸಂಖ್ಯೆ	ಶಿಶುಮಂದಿರ ಸಂಖ್ಯೆ	ಅನುಪಾಲನ ಗೃಹ ಸಂಖ್ಯೆ	ವಿಶೇಷ ದತ್ತು ಸಂಸ್ಥೆ ಸಂಖ್ಯೆ	ಅರ್ಹ ಸೌಲಭ್ಯ ಸಂಖ್ಯೆ	ವಿಶೇಷ ಗೃಹ ಸಂಖ್ಯೆ	ತೆರೆದ ತಂಗುದಾಣ ಸಂಖ್ಯೆ
27	ಉಡುಪಿ	1	1	1	0	0	0	0	0	0	0
28	ಉತ್ತರ ಕನ್ನಡ	1	1	1	0	0	0	0	0	0	0
29	ವಿಜಯಪುರ	2	1	1	0	0	0	0	1	0	7
30	ಯಾದಗಿರಿ	1	1	0	0	0	0	1	0	0	0
	ಒಟ್ಟು	33	31	17	1	1	1	11	6	1	34